ತುಂಟ ತರುಣನೊಬ್ಬ ಸಣ್ಣ ಕಲ್ಲೆತ್ತಿಕೊಂಡು ಗೊದ್ಲೆಯತ್ತ ಎಸೆದ. ಅದು ಅವನ ಮೂಗಿಗೆ ಬಡಿಯಿತು. ಅವನು ಕಣ್ಣು ಬಿಟ್ಟ. ಎಲ್ಲರೂ ಅವನ ಕಡೆ ಕೈ ತೋರಿಸಿ ನಗತೊಡಗಿದರು. ಗೊದ್ಲೆಗೆ ಅವರೇಕೆ ಹೀಗೆ ನಡೆದುಕೊಳ್ಳುತ್ತಿದ್ದಾರೆಂಬುದು ಅರ್ಥವಾಗದೆ ನೋಯುತ್ತಿದ್ದ ಮೂಗನ್ನು ಸವರಿಕೊಳ್ಳ ತೊಡಗಿದ.

'ಅವನು ಚಿಕ್ಕುಡುಗ, ಏನೂ ತಿಳೀದು, ಏನೋ ಕುತೂಹಲಕ್ಕೆ ಧ್ಯಾನಕ್ಕೆ ಕೂತಿದ್ದಾನೆ, ಹೊಡೆಯೋದೆಲ್ಲಾ ಮಾಡಬಾರದು' ಎಂದು ಮತ್ತೋರ್ವ ಹಿರಿಯ ರಾಮಸ್ವಾಮಿ ಬುದ್ಧಿವಾದ ಹೇಳಿದರು.

ಗೊದ್ಲೆ ಮೇಲೆದ್ದು ನಿಂತ. ಅವರೆಲ್ಲ ಗಿಡ ಮರಗಳ ಮಧ್ಯದ ಹಾದಿಯಲ್ಲಿ ನಡೆಯುತ್ತ ಮರೆಯಾದರೆ, ಬ್ರಾಹ್ಮಣ ಬಾಲಕರು ಬರುವುದು ಕಂಡಿತು.

ಗುಡಿಸಲಿಗೆ ಬಂದ ಗೊದ್ಲೆ ಕೆರೆಯ ಬಳಿ ನಡೆದುದ್ದನ್ನು ತನ್ನಪ್ಪ ಅವ್ವನಿಗೆ ಹೇಳಿದರೆ, ಚೆನ್ನಾಗಿ ಬೈದು ತಾನು ಇನ್ನೆಂದೂ ಕೆರೆ ಬಳಿ ಹೋಗದ ಹಾಗೆ ಮಾಡು ತ್ತಾರೆಂದು ಹೇಳಲಿಲ್ಲ.

ಇದಾದ ಮರ್‍ನಾಲ್ಕು ದಿನ ಕೆರೆಯ ಬಳಿ ಹೋಗಲಿಲ್ಲ. ಮುಳ್ಕಟ್ಟನಿಗೆ ಕರ್ಕ್ಕಿಲಿ 'ನೋಡಿ, ಅವನ್ನು ಮದ್ಲಂಗೆ ಕೆರೆತಾಕೆ ದಿನಾ ಹೋಯ್ತಾಯಿಲ್ಲ. ಯಾವತ್ತಾರ ಒಂದಿನ ಹ್ವಾದ್ರೆ ಬಯ್‌ಬ್ಯಾಡಿ' ಎಂದಳು.

ಮೂಗಿನ ನೋವು ಕಡಿಮೆಯಾಗಿತ್ತು. ಬೆಳಿಗ್ಗೆ ಎದ್ದು ಕೆರೆ ಹತ್ತಿರ ಹೋದಾಗ ರಾಮಸ್ವಾಮಿ ತಮ್ಮ ಹಳೆಯ ಜನಿವಾರವನ್ನು ಆಲದ ಮರಕ್ಕೆ ನೇತು ಹಾಕಿ, ಹೊಸ ಜನಿವಾರ ಹಾಕಿಕೊಳ್ಳುತ್ತಿದ್ದರು.

ತನ್ನ ಮಾಮೂಲಿ ಜಾಗದಲ್ಲಿ ಕುಳಿತ ಗೊದ್ಲೆ, ಹಿರಿಯ ಹಾಗೂ ಬಾಲ ಬ್ರಾಹ್ಮಣರೆಲ್ಲ ಬಂದು ಹೊರಟು ಹೋದ ನಂತರ, ಆಲದ ಮರದ ಬಳಿ ತೆರಳಿ ಸುತ್ತಮುತ್ತಲೊಮ್ಮೆ ಕಣ್ಣಾಡಿಸಿ ಯಾರೂ ಇಲ್ಲದ್ದನ್ನು ಖಾತ್ರಿ ಮಾಡಿ ಕೊಂಡು ಅಂಗಿ ಬಿಚ್ಚಿ ಜನಿವಾರವನ್ನು ಹೆಗಲಿಗೆ ಇಳೆ ಬಿಟ್ಟುಕೊಂಡು ಅಂಗಿ ತೊಟ್ಟುಕೊಂಡ. ದೊಡ್ಡದಾಗಿದ್ದ ಜನಿವಾರ ಎಡಭಾಗದಲ್ಲಿ ಅಂಗಿಯಿಂದ ಹೊರ ಕಾಣುತ್ತಿತ್ತು. ಅದನ್ನು ನುಲಿದು ಗಂಟು ಹಾಕಿದ. ಸೀದಾ ಕೆರೆಗೆ ಇಳಿದು ಸೂರ್ಯನಿಗೆ ತರ್ಪಣ ನೀಡಿ ಊರ ದಾರಿ ಹಿಡಿದ.

ಜನಿವಾರ ತೊಟ್ಟ ಮೇಲೆ ಅವನಲ್ಲೇನೊ ಹೊಸ ಬದಲಾವಣೆ ಆದಂತೆನಿಸಿತು. ನಾನೂ ಬ್ರಾಹ್ಮಣನಾದೆ ಎಂಬ ಹಿಡಿತಕ್ಕೆ ಸಿಗದ ಖುಷಿ ಅವನನ್ನು ಆವರಿಸಿತು. ನಡಿಗೆಯಲ್ಲಿ ಆತ್ಮವಿಶ್ವಾಸ ತುಂಬಿತು.

ಗುಡಿಸಲಿಗೆ ಬಂದವನು ಕೈಕಾಲು ಮುಖ ತೊಳೆದು ಇದೇ ಮೊದಲ ಸಲ ಹಣೆಗೆ ವಿಭೂತಿ ಇಟ್ಟುಕೊಂಡ. ಗೋಡೆಯ ಗೂಡಿನಲ್ಲಿದ್ದ ದೇವರಿಗೆ ಕೈ ಮುಗಿದ. ತನ್ನಪ್ಪನಿಗೆ, ಬಾರೆ ಕಡೆಗೆ ಹೋದಾಗ ಒಣಗಿದ ಗಂಧದ ತುಂಡನ್ನು, ಪೇಟೆಗೆ ಹೋದಾಗ ಊದುಕಡ್ಡಿಯನ್ನು ತರಬೇಕು, ದಿನಾ ತಾನು ದೇವರ ಪೂಜೆ ಮಾಡಬೇಕೆಂದು ಹೇಳಿದ.

ಮಗನಲ್ಲಾದ ಈ ದಿಢೀರ್ ಬದಲಾವಣೆ ಮುಳ್ಕಟ್ಟನಿಗೆ ಆಶ್ಚರ್ಯವುಂಟು ಮಾಡಿದರೆ ಕರ್ಕ್ಕಿಲಿಗೆ

